**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *12.03.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಟಿ.ಹೆಚ್.ಕೆ ರವರಿಂದಃ**

. ನನಗೆ ಹೇಳಿಕೆ ಕೊಡಬೇಕು ಎಂದು ಪೊಲೀಸರು ನೋಟಿಸ್ ಕೊಟ್ಟಿರಲಿಲ್ಲ. ಚಾ.ಸಾ–*1* ಚಂದನ್ ನನ್ನ ಸ್ವಂತ ತಮ್ಮನಿರುತ್ತಾನೆ ಎಂದರೆ ನಿಜ. ನಾನು ಯಾವ ಸ್ಟೇಡಿಯಂ ನಲ್ಲಿ ಇದ್ದೆ ಎಂದು ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ನಮ್ಮೂರಲ್ಲಿ ಒಂದೇ ಗ್ರೌಂಡ್ ಇರುವುದು. ಸ್ಟೇಡಿಯಂ ನಲ್ಲಿ ಯಾರ ಯಾರ ಜೊತೆ ಇದ್ದೆ ಎಂದು ಸಹ ಹೇಳಿಲ್ಲ ಎಂದರೆ ನಿಜ. ನಾನು ಸ್ಟೇಡಿಯಂ ನಲ್ಲಿ ಯಾವ ಸಮಯದ ವರೆಗೆ ಇದ್ದೆ ಎಂದು ಹೇಳಿಲ್ಲ ಎಂದರೆ ನಿಜ. ರಾತ್ರಿ *8.40* ರಿಂದ *8.45* ರ ಮಧ್ಯದಲ್ಲಿ ನನ್ನ ತಾಯಿ ನನಗೆ ಫೋನ್ ಮಾಡಿದ್ದರು. ಸ್ಟೇಡಿಯಂ ನಿಂದ ನಮ್ಮ ಮನೆ *2* ರಿಂದ *2 ½* ಕಿಮೀ ದೂರವಿದೆ. ಹೇಳಿಕೆಯಲ್ಲಿ ಎಷ್ಟು ಕಿಮೀ ದೂರವಿದೆ ಎಂದು ಹೇಳಿಲ್ಲ ಎಂದರೆ ನಿಜ. ಸ್ಟೇಡಿಯಂ ನಿಂದ ಘಟನೆ ಸ್ಥಳಕ್ಕೆ ಯಾವ ವಾಹನದಲ್ಲಿ ಹೋಗಿದ್ದೆ ಎಂದು ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ನಿಜ. ಸ್ಟೇಡಿಯಂ ನಿಂದ ಘಟನೆ ಸ್ಥಳಕ್ಕೆ *5–10* ನಿಮಿಷಕ್ಕೆ ಹೋಗಿದ್ದೆ. ಘಟನೆ ಸ್ಥಳಕ್ಕೆ ಯಾವ ಸಮಯಕ್ಕೆ ಹೋಗಿದ್ದೆ ಎಂದು ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ನಿಜ. ಹೇಳಿಕೆಯನ್ನು ನಾನು ಹೇಳಿದಂತೆ ಪೊಲೀಸರು ಟೈಪ್ ಮಾಡಿದ್ದಾರೆ. ಪೋಲೀಸ್ ಠಾಣೆಗೆ ನಾನೇ ಸ್ವತಾಃ ಹೊಗಿದ್ದೆ. ಘಟನೆ ದಿನ ನಾನು ಘಟನೆ ಸ್ಥಳದಲ್ಲಿ ಅಂದಾಜು *10* ನಿಮಿಷ ಇದ್ದೆ. ಆ ದಿನ ನಾನು ಆರೋಪಿತನನ್ನು ನೋಡಿಲ್ಲ. ಆ ಘಟನೆ ಸ್ಥಳದಲ್ಲಿ ಅಂದಾಜು *50* ಜನ ಸೇರಿದ್ದರು ಆ ಪೈಕಿ *25* ಜನರ ಹೆಸರು ಗೊತ್ತಿದೆ. ಅವರೆಲ್ಲರ ಹೆಸರನ್ನು ಹೇಳಿಕೆಯಲ್ಲಿ ಬರೆಸಿಲ್ಲ. ಘಟನೆ ಸ್ಥಳದಿಂದ ನಾನು ಆಸ್ಪತ್ರೆಗೆ ಹೋಗಿದ್ದೆ. *9* ಗಂಟೆ ಆಸುಪಾಸಿನಲ್ಲಿ ಆಸ್ಪತ್ರೆಗೆ ಹೊರಟಿದ್ದೆವು. ಘಟನೆ ಸ್ಥಳದಿಂದ ಕೆ.ಆರ್.ಆಸ್ಪತ್ರೆ *7–8* ಕಿಮೀ ದೂರವಿದೆ. ಘಟನೆ ಸ್ಥಳದಿಂದ ಕೆ.ಆರ್.ಆಸ್ಪತ್ರೆಗೆ ಹೋಗಲು *½* ಗಂಟೆ ಬೇಕಾಗುತ್ತದೆ. ರಾತ್ರಿ *9.30*

ರ ಆಸುಪಾಸಿನಲ್ಲಿ ಆಸ್ಪತ್ರೆಗೆ ತಲುಪಿದ್ದೆವು. ಆಸ್ಪತ್ರೆಗೆ ಎಷ್ಟು ಜನ ಹೋಗಿದ್ದೆವು ಎಂದು ಹೇಳಿಕೆಯಲ್ಲಿ ಹೇಳಿದ್ದೆ. ***4-5*** ಜನ ಆಸ್ಪತ್ರೆಗೆ ಹೋಗಿದ್ದೆವು. ಹೇಳಿಕೆಯಲ್ಲಿ ಆ ಬಗ್ಗೆ ನಮೂದು ಇಲ್ಲ ಎಂದರೆ ನಿಜ. ಯಾವ ವಾಹನದಲ್ಲಿ ಆಸ್ಪತ್ರೆಗೆ ಹೋಗಿದ್ದೆವು ಎಂದು ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ನಿಜ. ನಾನು ಘಟನೆ ಸ್ಥಳಕ್ಕೆ ಹೋಗೇ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಜೊತೆ ಮತ್ತು ನನ್ನ ತಮ್ಮನ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತನಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಮದ್ಯ ಸೇವನೆ ಮಾಡಿ ಬೈಕ್ ನಲ್ಲಿ ಹೋಗುವಾಗ ಮುಳ್ಳಿನ ತಂತಿ ಮೇಲೆ ಬಿದ್ದು ಗಾಯಗೊಂಡಿದ್ದಾನೆ ಎಂದರೆ ಸರಿಯಲ್ಲ. ಆ ದಿನ ವಿನಯ್ ಎನ್ನುವವರ ಕೇಸಿಗೆ ನನ್ನ ತಮ್ಮ ಸಾಕ್ಷಿ ಹಾಕಿದ್ದನ್ನು ವಾಪಸ್ಸು ಪಡೆದುಕೊಳ್ಳಿ ಎಂದು ಹೇಳುವ ಸಲುವಾಗಿ ಆರೋಪಿತ ಅಲ್ಲಿಗೆ ಬಂದಿದ್ದ ಮತ್ತು ಚಾಕುವಿನಿಂದ ಚುಚ್ಚಿದ್ದ ಎಂದು ನನ್ನ ತಮ್ಮ ಹೇಳಿದ್ದ. ಚಾಕು ಮತ್ತು ಡ್ರ್ಯಾಗರ್ ಬೇರೆ ಬೇರೆ ಎಂದರೆ ನಿಜ. ಆಸ್ಪತ್ರೆಗೆ ಹೋಗುವಾಗಲೇ ನನ್ನ ತಮ್ಮ ಘಟನೆ ಬಗ್ಗೆ ಹೇಳಿದ್ದ. ನಂತರ ಮನೆಗೆ ಬಂದಾಗಲೂ ಸಹ ನನ್ನ ತಮ್ಮ ಘಟನೆ ಬಗ್ಗೆ ಹೇಳಿದ್ದ. ಹೇಳಿಕೆಯಲ್ಲಿ ಮನೆಯಲ್ಲಿ ಹೇಳಿದ ಬಗ್ಗೆ ನಮೂದು ಇಲ್ಲ. ನನ್ನ ತಮ್ಮನಿಗೂ ಆರೋಪಿತನಿಗೂ ವೈಷಮ್ಯ ಇರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ನನ್ನ ಸಹಿ ಪಡೆದಿದ್ದಾರೆ. ಆ ದಾಖಲೆಯನ್ನು ನಾನು ಪೋಲೀಸ್ ಠಾಣೆಗೆ ಕೊಟ್ಟಿದ್ದೀನೋ ಇಲ್ಲವೊ ನೆನಪಿಲ್ಲ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*